ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು):

ಅ) ಕಳೆದ ಮಳೆಗಾಲದಲ್ಲಿ ಸಕಲೇಶಪುರ ಉಪ್ಪಿನಂಗಡಿ ಭಾಗದ ರಾಷ್ಟ್ರೀಯ ಹೆದ್ದಾರಿಯಲ್ಲಿ ಉಂಟಾದ ಹಾನಿಯನ್ನು ಗುಂಡಿ ಮುಚ್ಚುವ ಮೂಲಕ ದುರುಸ್ತಿಪಡಿಸಲಾಗಿದೆ. (ಬಾಕಿ ಇರುವ 600 ಮೀಟರ್ ರಸ್ತೆ ದುರುಸ್ತಿ ಕಾಮಗಾರಿ ಪ್ರಗತಿಯಲ್ಲಿದೆ)

ಆ) ಶಿರಾಡಿಘಾಟ್ ಪ್ರದೇಶದ ಪೂರ್ಣ ಭಾಗವನ್ನು ಗುಣಮಟ್ಟದ ಕಾಂಕ್ರೀಟ್ ರಸ್ತೆಯನ್ನಾಗಿ ನಿರ್ಮಾಣ ಮಾಡಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

ಇ) ಶಿರಾಡಿಘಾಟಿನ ಪೂರ್ಣ ಪ್ರಮಾಣದ ಭಾಗವನ್ನು ಕಾಂಕ್ರೀಟ್ ರಸ್ತೆಯನ್ನಾಗಿ ಮಾಡುವ ಪ್ರಸ್ತಾವನೆಗೆ ಕೇಂದ್ರ ಸರ್ಕಾರವು ಅನುಮೋದನೆ ನೀಡಿರುವುದಿಲ್ಲ. ಆದಾಗ್ಯೂ ಶಿರಾಡಿಘಾಟ್ ಪ್ರದೇಶದ ತಿರುವುಗಳ ಕಾಂಕ್ರೀಟ್‌ಕರಣಕ್ಕಾಗಿ ರೂ. 9.00 ಕೋಟಿ ಹಾಗೂ ಇತರ ಭಾಗದ ಡಾಂಬರೀಕರಣ ಕಾಮಗಾರಿಗಳ ಅಭಿವೃದ್ಧಿಗಾಗಿ ರೂ. 20.00 ಕೋಟಿ ಅಂದಾಜು ಪಟ್ಟಿ ಮಂಜೂರಾಗಿರುತ್ತದೆ.

ಈ) ಈ ರಾಷ್ಟ್ರೀಯ ಹೆದ್ದಾರಿಯನ್ನು ಪೂರ್ಣ ಪ್ರಮಾಣದಲ್ಲಿ ಸುವ್ಯವಸ್ಥಿತವಾಗಿರಿಸಲು ಮೇಲಿನ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಈ ಕಾಮಗಾರಿಗಳ ದರಗಳನ್ನು ಆಧರಿಸಿದ ಪರಿಷ್ಕೃತ ಅಂದಾಜು ಪಟ್ಟಿಯ ಅನುಮೋದನೆಗೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರವು ಗುತ್ತಿಗೆದಾರರ ದರಗಳು ಹೆಚ್ಚಾಗಿದ್ದುದರ ಹಾಗೂ ಕೆಲವು ಟೆಂಡರ್‌ಗಳಲ್ಲಿ ಏಕಮಾತ್ರ ಗುತ್ತಿಗೆದಾರರು ಭಾಗವಹಿಸಿರುವುದರಿಂದ ಮತ್ತೊಮ್ಮೆ ಟೆಂಡರ್ ಕರೆಯಲು ಸೂಚಿಸಿರುತ್ತಾರೆ. ಅದರಂತೆ ಮತ್ತೊಮ್ಮೆ ಟೆಂಡರ್ ಕರೆದಾಗ ಯಾವ ಗುತ್ತಿಗೆದಾರರು ಭಾಗವಹಿಸಿರುವುದಿಲ್ಲ. ಇದನ್ನು ಕೇಂದ್ರ ಸರ್ಕಾರಕ್ಕೆ ವರದಿ ಮಾಡಲಾಗಿದೆ ಹಾಗೂ ಈಗಾಗಲೇ ಸಲ್ಲಿಸಿರುವ ಗುತ್ತಿಗೆದಾರರ ಟೆಂಡರ್ ದರಗಳನ್ನು ಆಧರಿಸಿದ ಪರಿಷ್ಕೃತ ಅಂದಾಜು ಪಟ್ಟಿಯನ್ನು ಅನುಮೋದಿಸಲು ಮತ್ತೊಮ್ಮೆ ಕೋರಲಾಗಿದೆ.

1966 (2349) ಶ್ರೀ ರಾಜೇಂದ್ರ ವರ್ಮಾ (ಹುಲಸೂರ) :– ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆ ಹುಲಸೂರು ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 2 ವರ್ಷಗಳಿಂದ ಲೋಕೋಪಯೋಗಿ ಇಲಾಖೆಯಿಂದ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಅನುದಾನದಲ್ಲಿ

ಕೈಗೆತ್ತಿಕೊಂಡ ಕಾಮಗಾರಿಗಳೆಷ್ಟು; ಯಾವ ಯಾವ ಕಾಮಗಾರಿಗಳು ಚಾಲನೆಯಲ್ಲಿವೆ (ವಿವರಗಳನ್ನು ಒದಗಿಸುವುದು)

ಆ) ಈ ಪೈಕಿ ಎಷ್ಟು ಕಾಮಗಾರಿಗಳು ಮುಕ್ತಾಯಗೊಂಡಿವೆ;

ಇ) ಇದಕ್ಕೆ ವೆಚ್ಚ ಮಾಡಿರುವ ಹಣವೆಷ್ಟು ಹಾಗೂ ಇನ್ನೂ ಎಷ್ಟು ಕಾಮಗಾರಿಗಳು ಅಪೂರ್ಣವಾಗಿವೆ;

ಈ) ಈ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯು ಕೈಗೊಂಡಿರುವ ಬಹುತೇಕ ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ ಸರ್ಕಾರವು ಈ ಸಂಬಂಧವಾಗಿ ತನಿಖೆಯನ್ನು ನಡೆಸಿ, ಈ ಕಳಪೆ ಕಾಮಗಾರಿಗಳನ್ನು ಕೈಗೊಳ್ಳಲು ಕಾರಣರಾದವರ ಮೇಲೆ ಕ್ರಮ ಕೈಗೊಂಡು ಅವರುಗಳನ್ನು ಕಪ್ಪು ಪಟ್ಟಿಗೆ ಸೇರಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಹುಲಸೂರ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 2 ವರ್ಷಗಳಿಂದ ಕೈಗೆತ್ತಿಕೊಂಡ ಕಾಮಗಾರಿಯ ವಿವರ ಈ ಕೆಳಗಿನಂತಿವೆ.

ಕ್ರ.ಸಂ.	ವರ್ಷ	ಕಾಮಗಾರಿಯ ಹೆಸರು		ಷರಾ
		ರಾಜ್ಯ ಸರ್ಕಾರದ ನೆರವಿನಿಂದ	ಕೇಂದ್ರ ಸರ್ಕಾರದ ನೆರವಿನಿಂದ	
1.	2004–05	ಧನ್ನೂರ (ಕೆ) ಕ್ರಾಸ್ ದಿಂದ ಘಾಟಬೋರಾಳ ರಸ್ತೆ ಸುಧಾರಣೆ	–	ಕೆಲಸವು ಪೂರ್ಣಗೊಂಡಿದೆ
2.	2004–05	ಹುಮನಾಬಾದ ತಾ: ದುಬಲಗುಂಡಿ ಕಬೀರಾಬಾದವಡಿ ಕ್ರಾಸ್ ರಸ್ತೆ ಸುಧಾರಣೆ	–	ಸದರ
3.	2004–05	ಹುಮನಾಬಾದ ತಾ: ಕುಮಾರ ಚಿಂಚೋಳಿ – ಹಂದಿಕೇರಾ ರಸ್ತೆ ಸುಧಾರಣೆ	–	ಸದರ
4.	2004–05	ಭಾಲ್ಕಿ ತಾ: ಚಳಕಪೂರ– ಹಳ್ಳಿಖೇಡ ರಸ್ತೆ ಸುಧಾರಣೆ	–	ಸದರ
5.	2004–05	ಭಾಲ್ಕಿ ತಾ: ಮುರಂಬಿ ಆರ್ ಗೌಂಡಗಾಂವ್ ರಸ್ತೆ ಸುಧಾರಣೆ	–	ಸದರ
6.	2004–05	ಮಾಣಿಕನಗರ–ಘೊಡವಾಡಿ ವಾಯಾ ಘಾಟಬೋರಾಳ	–	ಸದರ

7.	2004–05	ಕೇಸರಜವಾಳ–ಅಳವಾಯಿ ರಸ್ತೆ	–	ಕೆಲಸ ಮುಗಿಯುವ ಹಂತದಲ್ಲಿದೆ
8.	2004–05	ಬಸವಕಲ್ಯಾಣ ಬಿ.ಎನ್. ರಸ್ತೆ	–	ಕೆಲಸವು ಮುಗಿದಿದೆ.
9.	2005–06	ಬಸವಕಲ್ಯಾಣ ತಾಲ್ಲೂಕಿನ ಬಿ.ಎನ್. ರಸ್ತೆಯಿಂದ ಮಾಚನಾಳ ಗ್ರಾಮಕ್ಕೆ ಕೂಡು ರಸ್ತೆ ನಿರ್ಮಾಣ.	–	ಸದರ
10.	2005–06	ಭಾಲ್ಕಿ ತಾ: ಸಿಕಿಂದ್ರಾಬಾದವರಿ ಖಟಕ್‌ಚಿಂಚೋಳಿ ರಸ್ತೆ ಸುಧಾರಣೆ	–	ಸದರ
11.	2005–06	ಭಾಲ್ಕಿ ತಾ: ಡಾವರಗಾಂವ–ಮಾಸಿಮಾಡ ರಸ್ತೆ ಸುಧಾರಣೆ	–	ಸದರ

ಆ) ಈ ಪೈಕಿ 10 ಕಾಮಗಾರಿಗಳು ಮುಕ್ತಾಯಗೊಂಡಿವೆ.

ಇ) ಇದಕ್ಕೆ ಆಗಿರುವ ವೆಚ್ಚ ರೂ. 241.69 ಲಕ್ಷಗಳು ಹಾಗೂ ಯಾವ ಕಾಮಗಾರಿಯೂ ಅಪೂರ್ಣವಿರುವುದಿಲ್ಲ.

ಈ) ಎಲ್ಲ ಕಾಮಗಾರಿಗಳ ಗುಣಮಟ್ಟವನ್ನು ಗುಣ ನಿಯಂತ್ರಣ ಇಲಾಖೆಯಿಂದ ಪರೀಕ್ಷಿಸಲಾಗಿದೆ. ಆದ್ದರಿಂದ ಇಂತಹ ಪ್ರಕರಣಗಳು ಇರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

1967 (2350) ಶ್ರೀ ರಾಜೇಂದ್ರ ವರ್ಮಾ (ಹುಲಸೂರು):– ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಹಳ್ಳಿಖೇಡ್ ಗ್ರಾಮ ಪಂಚಾಯತಿಯು 41 ಸದಸ್ಯರನ್ನು ಹೊಂದಿದ್ದು, ರಾಜ್ಯದಲ್ಲಿಯೇ ಅತಿ ದೊಡ್ಡ ಗ್ರಾಮ ಪಂಚಾಯತಿಯಾಗಿರುವುದು ನಿಜವಲ್ಲವೇ;

ಆ) ಹಾಗಿದ್ದಲ್ಲಿ ಈ ಗ್ರಾಮ ಪಂಚಾಯತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೆ ಏರಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ;

ಇ) ಈ ಸಂಬಂಧವಾಗಿ ಸರ್ಕಾರ ಇಲ್ಲಿಯವರೆಗೆ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ;

ಈ) ಈ ಬಗ್ಗೆ ಬೀದರ್ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಎಂದು ವರದಿಯನ್ನು ಸಲ್ಲಿಸಿದ್ದಾರೆಯೇ;

ಉ) ಸರ್ಕಾರವು ಪ್ರಸಕ್ತ ಸಾಲಿನಲ್ಲಿ ಹಳ್ಳಿಖೇಡ ಗ್ರಾಮ ಪಂಚಾಯತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಆರ್. ಶ್ರೀನಿವಾಸ (ಪೌರಾಡಳಿತ ಸಚಿವರು)

ಅ) ಹೌದು

ಆ) ಹೌದು

ಇ) ಆದರೆ ಇಂತಹ ಪ್ರಸ್ತಾವನೆಗಳನ್ನು ಪರಿಶೀಲಿಸಲು ಕೇಂದ್ರ ಸರ್ಕಾರದ ಡಿಲಿಮಿಟೇಷನ್ ಕಮೀಷನ್‌ರವರ ನಿರ್ಬಂಧವಿದೆ. ಆದ್ದರಿಂದ ಅನುಮತಿ ಕೋರಿ ಪತ್ರ ಬರೆಯಲಾಗಿದೆ. ಅನುಮತಿ ಬಂದ ನಂತರ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಈ) ಹೌದು